ಎಂ.ಎಸ್.ಸುಂಕಾಪುರರ ಶತಕ ಸಾಹಿತ್ಯ ಸಂಪಾದನೆ: ಒಂದು ಅವಲೋಕನ

ಎ.ಆರ್. ಮಹೇಂದ್ರ*

DOI: https://doi.org/10.5281/zenodo.22252520

ABSTRACT

ಕನ್ನಡ ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಡಾ. ಎಂ. ಎಸ್. ಸುಂಕಾಪುರ ಅವರ ಕೊಡುಗೆ ಅಪಾರ ಹಾಗೂ ಅನನ್ಯವಾದದ್ದು. ಅವರು ಕಾವ್ಯ, ವಚನ, ಜಾನಪದ ಹಾಗೂ ಶತಕ ಸಾಹಿತ್ಯಗಳನ್ನು ಅತ್ಯಂತ ವೈಜ್ಞಾನಿಕವಾಗಿ ಸಂಪಾದಿಸಿ ನಾಡಿಗೆ ನೀಡಿದ್ದಾರೆ. ನೂರು ಪದ್ಯಗಳನ್ನೊಳಗೊಂಡ, ಭಕ್ತಿ ಮತ್ತು ನೀತಿಬೋಧನಾ ಪ್ರಧಾನವಾದ ವಿಶಿಷ್ಟ ಕಾವ್ಯ ಪ್ರಕಾರ 'ಶತಕ ಸಾಹಿತ್ಯ'ದ ಸಂಪಾದನೆಯಲ್ಲಿ ಸುಂಕಾಪುರರು ಅನುಸರಿಸಿದ ವೈಧಾನಿಕತೆ ಹಾಗೂ ಅವರ ಪಾಂಡಿತ್ಯವನ್ನು ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಪ್ರಮುಖವಾಗಿ ಹರಿಹರನ 'ರಕ್ಷಾಶತಕ–ಪಂಪಾಶತಕ', 'ನಿಜಲಿಂಗ ಶತಕ', 'ಸೋಮೇಶ್ವರ ಶತಕ' ಹಾಗೂ 'ಗುಮ್ಮಟ ಶತಕ'ಗಳ ಸಂಪಾದನಾ ಕಾರ್ಯದಲ್ಲಿ ಅವರು ತೋರಿದ ಬದ್ಧತೆ ಎದ್ದುಕಾಣುತ್ತದೆ. ಹಸ್ತಪ್ರತಿಗಳ ಸಂಗ್ರಹ, ಪಾಠಾಂತರಗಳ ನಿಖರ ಪರಿಷ್ಕರಣೆ, ಕವಿಗಳ ಕಾಲಮಾನದ ಜಿಜ್ಞಾಸೆಗಳ ಇತ್ಯರ್ಥ, ಸುದೀರ್ಘ ಪ್ರಸ್ತಾವನೆ, ಭಾವಾನುವಾದ ಹಾಗೂ ಕಠಿಣ ಶಬ್ದಕೋಶಗಳ ರಚನೆಯ ಮೂಲಕ ಸುಂಕಾಪುರರು ಪ್ರಾಚೀನ ಶತಕ ಕೃತಿಗಳನ್ನು ಇಂದಿನ ಓದುಗರಿಗೆ ಸುಲಭವಾಗಿ ಹಾಗೂ ಶಾಸ್ತ್ರೀಯವಾಗಿ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

KEYWORDS: ಎಂ. ಎಸ್. ಸುಂಕಾಪುರ, ಶತಕ ಸಾಹಿತ್ಯ, ಗ್ರಂಥ ಸಂಪಾದನೆ, ಹಸ್ತಪ್ರತಿ ಪರಿಷ್ಕರಣೆ, ಪಾಠಾಂತರ.

* **ಡಾ. ಎ.ಆರ್. ಮಹೇಂದ್ರ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಂಚನಹಳ್ಳಿ, ಕಡೂರು.

ಕನ್ನಡ ಸಾಹಿತ್ಯಲೋಕದಲ್ಲಿ, ಪ್ರಮುಖವಾಗಿ ಹಾಸ್ಯಪ್ರಕಾರದಲ್ಲಿನ ಸಾಹಿತಿಗಳಲ್ಲೊಬ್ಬರು. 1921ರಲ್ಲಿ ಜನಿಸಿದ ಸುಂಕಾಪುರ ಅವರು, ಗದಗ ಜಿಲ್ಲೆಯ ಮುಳಗುಂದದವರು. ಇವರು, ಬೆಳಗಾವಿ, ಬಾಗಲಕೋಟೆಯಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಹಾಸ್ಯಸಾಹಿತಿಯಾದ ಎಂ.ಎಸ್.ಸುಂಕಾಪುರ ಅವರು ಕನ್ನಡ ಸಾಹಿತ್ಯದಲ್ಲಿ 'ಹಾಸ್ಯ' ಎಂಬ ಸಂಶೋಧನಾ ಪ್ರೌಢ ಪ್ರಬಂಧವನ್ನು ರಚಿಸಿ, ಅದಕ್ಕಾಗಿ ಡಾಕ್ಟರೇಟ್ ಪದವಿಯನ್ನು ಪಡೆದವರು.

ಕನ್ನಡ ಗ್ರಂಥಸಂಪಾದನೆಗೆ ತನ್ನದೇ ಆದ ಇತಿಹಾಸ ಇದೆ. ಈ ಇತಿಹಾಸದಲ್ಲಿ ಅನೇಕ ಮಹನೀಯರು ಹಗಲಿರುಳು ಶ್ರಮಿಸಿ ಇಡೀ ನಾಡಿಗೆ ಅಮೂಲ್ಯವಾದ ಕೃತಿಗಳ ಸಂಪತ್ತನ್ನು ಸಂಪಾದಿಸಿಕೊಟ್ಟಿದ್ದಾರೆ. ಈ ಗ್ರಂಥಸಂಪಾದನೆಯ ಪರಂಪರೆಯನ್ನು ತಿಳಿಯುವ, ಅಳವಡಿಸಿಕೊಳ್ಳುವ ಮತ್ತು ಬೆಳೆಸುವ ಅನಿವಾರ್ಯತೆ ಅಗತ್ಯತೆ ಇಂದಿನ ತಲೆಮಾರಿಗೆ ಇದೆ. ಗ್ರಂಥ ಸಂಪಾದನೆ ಕ್ಷೇತ್ರದಲ್ಲಿ ದುಡಿದ ವಿದ್ವಾಂಸರಲ್ಲಿ ಡಾ. ಎಂ. ಎಸ್. ಸುಂಕಾಪುರ ಅವರು ಪ್ರಮುಖರು. ಎಂ. ಎಸ್. ಸುಂಕಾಪುರ ಅವರು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಅವಿರತವಾಗಿ ಶ್ರಮಿಸಿ ಕಾವ್ಯಗಳನ್ನು, ವಚನ ಸಾಹಿತ್ಯ ಕೃತಿಗಳನ್ನು, ರಗಳೆಗಳನ್ನು, ಶತಕ ಕೃತಿಗಳನ್ನು ಹಾಗೂ ಜಾನಪದ ಕೃತಿಗಳನ್ನು ಸಂಪಾದಿಸಿ ನಮ್ಮ ಸಾಹಿತ್ಯಕ್ಷೇತ್ರಕ್ಕೆ ಕಾಣಿಕೆ ಕೊಟ್ಟಿದ್ದಾರೆ. ಅವುಗಳಲ್ಲಿ ಶತಕ ಸಾಹಿತ್ಯ ಸಂಪಾದನೆಯನ್ನು ಇಲ್ಲಿ ಅವಲೋಕಿಸೋಣ.

ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಶತಕ ಸಾಹಿತ್ಯ ಪ್ರಕಾರವೂ ಒಂದು. ಹೆಸರೇ ಸೂಚಿಸುವಂತೆ ಇದು ನೂರು ಪದ್ಯಗಳಿಂದ ಕೂಡಿದ ಸಾಹಿತ್ಯ ಪ್ರಕಾರ. ಇದನ್ನು ಕವಿಗಳು ಭಕ್ತಿ, ವೈರಾಗ್ಯ, ಪ್ರೀತಿ, ಶಿವ ಶರಣರ ಬಣ್ಣನೆಗೆ, ನೈತಿಕತೆ, ಸಿದ್ಧಾಂತಗಳನ್ನು, ಶೃಂಗಾರಗಳನ್ನು ದೇವತಾ ಸ್ತುತಿಗಳ ಅಭಿವ್ಯಕ್ತಿಗೆ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಕಂದಪದ್ಯ, ವೃತ್ತ, ಷಟ್ಪದಿ, ಸಾಂಗತ್ಯ ಮೊದಲಾದ ಛಂದಸ್ಸಿನಲ್ಲಿ ರಚಿತವಾಗಿರುತ್ತದೆ. ಪ್ರತಿ ವೃತ್ತದ ಕೊನೆಯಲ್ಲಿ ಕವಿಯ ಅಂಕಿತವಿರುವುದು ಇದರ ಇನ್ನೊಂದು ಲಕ್ಷಣ. ಕವಿಯ ಇಷ್ಟದೈವವೇ ಅಂಕಿತವಾಗಿರುವುದು ಇನ್ನೂ ವಿಶೇಷ. ಇದು ಆತ್ಮನಿಷ್ಠವಾದ, ಭಾವನಿಷ್ಠವಾದ ಕಾವ್ಯ ಪ್ರಕಾರ. ಕನ್ನಡ ಶತಕಗಳಿಗೆ ಮೂಲ ಸಂಸ್ಕೃತ. ನಾಗವರ್ಮಾಚಾರ್ಯನ "ಚಂದ್ರಚೂಡಾಮಣಿ ಶತಕ" (ಕಾಲ ಸು.1070) ಕನ್ನಡದ ಮೊಟ್ಟಮೊದಲನೆಯ ಶತಕ ಗ್ರಂಥ. ನಂತರ ಕೊಂಡಗುಳಿ ಕೇಶಿರಾಜನಾದಿಯಾಗಿ ಅನೇಕ ಕವಿಗಳು ಶತಕಗಳನ್ನು ಬಳಸಿ ಕೃತಿ ರಚಿಸಿದರು. ಕನ್ನಡನಾಡಿನ ಸಾಹಿತ್ಯಕ್ಕೆ ಕೊಡುಗೆ ನೀಡಿದ ಪ್ರಮುಖ ಮತಗಳಾದ ಜೈನಮತ, ವೀರಶೈವಮತ ಮತ್ತು ಬ್ರಾಹ್ಮಣಮತದ ಕವಿಗಳು ಈ ಸಾಹಿತ್ಯ ಪ್ರಕಾರದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಆದಾಗ್ಯೂ ವೀರಶೈವ ಕವಿಗಳು ಈ ಸಾಹಿತ್ಯ ಪ್ರಕಾರವನ್ನು ದುಡಿಸಿಕೊಂಡವರಲ್ಲಿ ಮೊದಲಿಗರು. ಕಡಿಮೆ ಎಂದರೂ ಸುಮಾರು ಇನ್ನೂರಕ್ಕೂ ಮಿಗಿಲಾಗಿ ಶತಕದಲ್ಲಿ ಕೃತಿಗಳನ್ನು ರಚಿಸಿ ಪಾರಮ್ಯವನ್ನು ಮೆರೆದಿದ್ದಾರೆ. ಈ ಶತಕಗಳ ವೈಶಿಷ್ಟ್ಯತೆಯೆಂದರೆ ಶತಕಗಳ ವಸ್ತು, ಅದರ ರೂಪ ವೈವಿಧ್ಯತೆಯಿಂದ ಕೂಡಿರುವುದು. ಶತಕಗಳಲ್ಲಿ

ಬಳಸಿದ ಭಾಷೆ ಮತ್ತು ಆಶಯಗಳ ದೃಷ್ಟಿಯಿಂದ ಈ ಸಾಹಿತ್ಯ ಪ್ರಕಾರ ಅನನ್ಯತೆ ಗಳಿಸಿಕೊಂಡಿದೆ. ಭಾಷೆ ಸರಳವಾಗಿ, ದೇಶಿಯತೆಯ ಸೊಬಗಿನಲ್ಲಿ ಶೋಭಿಸುತ್ತದೆ. ಈಗಾಗಲೇ ಹೇಳಿದಂತೆ ಈ ಶತಕದ ವಸ್ತು ರೂಪವಾಗಿ ಭಕ್ತಿ, ವೈರಾಗ್ಯ, ಪ್ರೀತಿ, ಶಿವ ಶರಣರ ಬಣ್ಣನೆಗೆ, ನೈತಿಕತೆ, ಸಿದ್ಧಾಂತ, ಶೃಂಗಾರ, ದೇವತಾ ಸ್ತುತಿಗಳಿಗೆ ಸ್ಥಾನ ಪಡೆದಿವೆ.

ಕೊಂಡಗುಳಿ ಕೇಶಿರಾಜನ 'ಮಂತ್ರಮಹತ್ವದಕಂದ, ಲಿಂಗಮಹತ್ವದಕಂದ' ಕೃತಿಗಳ ನಂತರ ಬಂದ ಹರಿಹರ (1250) ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆದ ಕವಿ. ಅವನೊಬ್ಬ ಕ್ರಾಂತಿ ಕವಿ, ಭಕ್ತ ಕವಿ ಮತ್ತು ಹಿರಿಯ ಕವಿ. ಮೊದಲಿನಿಂದಲೂ ನಡೆದು ಬಂದ ಚಂಪುಶೈಲಿಯ ಬಿಗುವನ್ನು ಸಡಿಲಿಸಿ ಸಾಮಾನ್ಯ ಜನತೆಗೂ ಅರ್ಥವಾಗಬಲ್ಲ ನಡುಗನ್ನಡ ಶೈಲಿಯಲ್ಲಿ ಕಾವ್ಯವನ್ನು ಬರೆದ ಧೀರಕವಿ. ಕನ್ನಡಕಾವ್ಯದ ಭಾವ, ಭಾಷೆ, ಶೈಲಿಗಳಲ್ಲಿ ಮಹತ್ವದ ಮಾರ್ಪಾಡು ತಲೆದೋರುವಂತೆ ಮಾಡಿದ ಕವಿ. ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಬೆಳೆದ ಕವಿ. ಪಂಪಾವಿರೂಪಾಕ್ಷನನ್ನೇ ತನ್ನ ಆರಾಧ್ಯ ಇಷ್ಟದೈವವನ್ನಾಗಿ ಸ್ವೀಕರಿಸಿ ಭಕ್ತಿನಿಷ್ಠೆಯನ್ನು ಮೆರೆದವನು. ಅದಕ್ಕೆ ಈ ಕೆಳಗಿನ ಪದ್ಯದ ಸಾಲುಗಳು ಪುಷ್ಟಿನೀಡುತ್ತವೆ.

'ಎರಗುವೆನೆನ್ನ ಹಂಪೆಯರಸಂಗೆ ಶಿವಂಗೆ' ಎನ್ನುವ ಮಾತು. ಬೇಡುವುದಾದರೂ 'ಅನೂನ ದಾನಿಯಂ ಅಲಂಪಿನ ಪೆಂಪಿನ ಹಂಪೆಯಾಳ್ದನಂ' ಯಾಚಿಸುತ್ತಾನೆ. ಇಂತಹ ಅಭಿಮಾನ ದೊರೆಯುವುದು ಕನ್ನಡ ಸಾಹಿತ್ಯದಲ್ಲಿ ವಿರಳ. ಹಂಪೆಯಲ್ಲಿದ್ದ ಹರಿಹರ ಹೊಯ್ಸಳರ ಆಸ್ಥಾನ ಕೆರೆಯಪದ್ಮರಸನ ಬಳಿ ಹೋಗಿ ಕರಣಿಕ ವೃತ್ತಿಯನ್ನು ಕೈಗೊಂಡು ಪುರಾತನರ ರಗಳೆಗಳನ್ನು ಬರೆದ. ಪರಮೇಶ್ವರನಿಗೆ ಮನಸೋತ ಹರಿಹರನಿಗೆ ರಾಜಪ್ರಭುತ್ವದ ಕಿಂಕರತ್ವ ಹೇಸಿಗೆಯೆನಿಸಿ ಮರಳಿ ತನ್ನ ದೈವದ ಮಡಿಲಿಗೆ ಬಂದೆ ಎನ್ನುವುದನ್ನು ಈ ಪದ್ಯದಲ್ಲಿ ನೋಡಬಹುದು.

ಪೋಗನೆ ಪೋಪ ಬಾರೆಲವೊ ಬಾರೆನೆ ಜೀಯ ಹಸಾದವೆಂದು ಬೆ
ಳ್ಳಾಗುತೆ ಬರ್ಪ ಮಾಣೆಲವೋ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ
ತ್ತಾಗಲೇ ಝುಂಕಿಸಲಡುಗಿ ಬೀಳುವ ಸೇವೆಯ ಕಷ್ಟವೃತ್ತಿಯಂ
ನೀಗಿದೆನಿಂದು ನಿಮ್ಮ ದೆಸೆಯಿಂದ ಕರುಣಾಕರ ಹಂಪೆಯಾಳ್ದನೇ ।

ಆತನು ಬರೆದ ರಕ್ಷಾ ಶತಕ ಮತ್ತು ಪಂಪಾಶತಕ ಸಂಸ್ಕೃತ ಶತಕದ ಎಲ್ಲಾ ಲಕ್ಷಣಗಳನ್ನೊಳಗೊಂಡ ಕೃತಿಯಂತೆ ರಚಿತವಾಯಿತು. ಹರಿಹರ ಕವಿಯು ಒಬ್ಬ ಮನೋವಿಜ್ಞಾನಿಯಂತೆ ಸ್ವಯಂ ಅಂತರಾವಲೋಕನ ಮಾಡಿಕೊಳ್ಳಲು ರಕ್ಷಾ ಶತಕವನ್ನು ಬಳಸಿಕೊಂಡಂತಿದೆ. ತನ್ನ ಮನಸನ್ನು ಒಳಹೊಕ್ಕು ನೋಡುವ ಕಲೆ ಹರಿಹರನಿಗೆ ಕರಗತವಾಗಿರುವುದರ ದ್ಯೋತಕವಾಗಿ ರಕ್ಷಾಶತಕವನ್ನು ನೋಡಬಹುದು. ಇನ್ನೂ ಅಂತರಾವಲೋಕನ ಮಾಡಿಕೊಳ್ಳುವ ವ್ಯಕ್ತಿ ದೈವದಲ್ಲಿ ಭಕ್ತಿಯುಳ್ಳವನಾಗಿರುವುದು ಸಹಜವೇ ಸರಿ. ಅದರಂತೆ ತನ್ನ ತಪ್ಪುಗಳನ್ನು ಸರಿಪಡಿಸಿ ಸರಿದಾರಿಗೆ ಮುನ್ನೆಡೆಸು ಎಂದು ತನ್ನ ಇಷ್ಟದೈವದಲ್ಲಿ ಮೊರೆಯಿಡಲು ಪಂಪಾಶತಕವನ್ನು ಸದ್ಬಳಕೆ

ಮಾಡಿಕೊಂಡಿದ್ದಾನೆ. ಆದರೂ ಈ ಶತಕಗಳನ್ನು ಸರಿಯಾಗಿ ತನ್ನ ಭಾವತೀವ್ರತೆಗಳ ವೇಗಕ್ಕೆ ಒಗ್ಗಿಸಿಕೊಂಡವನು ಮಹಾಕವಿ ಹರಿಹರ (ಕಾಲ ಸು 1250). ಇರಲಿ ಈಗ ಸುಂಕಾಪುರ ಅವರ ಶತಕ ಸಾಹಿತ್ಯ ಸಂಪಾದನೆಯ ವೈಧಾನಿಕತೆಯನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಎಂ.ಎಸ್.ಸುಂಕಾಪುರ ಅವರು ರಕ್ಷಾಶತಕ, ಪಂಪಾಶತಕ, ಗುಮ್ಮಟ ಶತಕ, ನಿಜಲಿಂಗ ಶತಕ ಮತ್ತು ಸೋಮೇಶ್ವರ ಶತಕ, ಶ್ರೀವಿರೂಪಾಕ್ಷ ಶತಕ, ಶ್ರೀಗುರು ಶಂಕರೇಶ್ವರ ಶತಕಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಒಂದೊಂದೇ ಕೃತಿಗಳ ಸಂಪಾದನೆಯ ವೈಧಾನಿಕತೆಯನ್ನು ಇಲ್ಲಿ ಗಮನಿಸಲಾಗಿದೆ.

ಹರಿಹರನ ರಕ್ಷಾಶತಕ–ಪಂಪಾಶತಕ

ಎಂ. ಎಸ್. ಸುಂಕಾಪುರ ಅವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿದ್ದಾಗ ಈ ಹರಿಹರ ವಿರಚಿತ ರಕ್ಷಾಶತಕ–ಪಂಪಾಶತಕ ಸಂಪಾದಿಸಿ ಮೊದಲ ಮುದ್ರಣ ಮಾಡಿದ್ದು 1976ರಲ್ಲಿ. ಹರಿಹರನ ಈ ಕೃತಿಯು ಎರಡು ಶತಕಗಳನ್ನು ಒಳಗೊಂಡಿದೆ. ರಕ್ಷಾ ಶತಕ ಮತ್ತು ಪಂಪಾ ಶತಕ ಹರಿಹರದೇವನ ವಿಶಿಷ್ಟ ಕೃತಿಗಳು. ಕವಿಯ ಸ್ವಾನುಭಾವ, ಶಿವಭಕ್ತಿ ಈ ಕೃತಿಗಳಲ್ಲಿ ತುಂಬಿಕೊಂಡಿದೆ. ರಕ್ಷಾಶತಕದಲ್ಲಿ ಕವಿಯು ಅಂತರಾವಲೋಕನ ಮಾಡಿಕೊಳ್ಳುವ ಮನೋವೃತ್ತಿಯನ್ನು ಕಾಣುತ್ತೇವೆ. ಪಂಪಾಶತಕದಲ್ಲಿ ಅವನ ಶಿವಭಕ್ತಿಯ ಪರಾಕಾಷ್ಠೆಯನ್ನು ಚಿತ್ರಿಸಿದ್ದಾನೆ. ಈ ಕೃತಿಗಳು ಹುಟ್ಟಿ ಬರುವುದಕ್ಕೆ ಹರಿಹರದೇವನ ಜೀವನ ಲಹರಿಯೇ ಕಾರಣವಾಗಿದೆ. ಹರಿಹರನು ಸ್ವತಂತ್ರ ಮನೋವೃತ್ತಿಯ ಭಕ್ತ. ಹೊಯ್ಸಳ ಅರಸರ ನಡೆ ನುಡಿ ಕವಿಗೆ ಹೊಂದಿಕೆಯಾದಂತೆ ಕಾಣಲಿಲ್ಲ. ಜಗದ ಆಚಾರ ವಿಚಾರ ಅವನ ಮನಸ್ಸಿಗೆ ಅತೃಪ್ತಿಯನ್ನೇ ತಂದವು. ಸುಳ್ಳು, ಮೋಸ, ಅನಾಚಾರ, ಹಿಂಸೆಗಳಿಗೆ ಆಗರವಾದ ಅರಮನೆ ಕವಿಯಲ್ಲಿ ವೈರಾಗ್ಯದ ಬೀಜವನ್ನೇ ಬಿತ್ತಿರಬೇಕೆನಿಸುತ್ತದೆ. ‘ರಕ್ಷಾಶತಕ’ವು 101 ಅಕ್ಷರ ಸಮವೃತ್ತಗಳಿಂದ ಕೂಡಿದೂ ಅವುಗಳೆಲ್ಲವೂ ಖ್ಯಾತ ಕರ್ನಾಟಕ ವೃತ್ತಗಳು. ಪ್ರತಿವೃತ್ತ ‘ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ’ ಎಂದು ಮುಕ್ತಾಯಗೊಳ್ಳುತ್ತದೆ. ಮೊದಲ ವೃತ್ತದಲ್ಲಿ ವಿರೂಪಾಕ್ಷಸ್ತುತಿ ಇದೆ 100ನೆಯ ವೃತ್ತದಲ್ಲಿ ಕೃತಿ ಓದುವುದರ ಲಾಭವನ್ನು ತಿಳಿಸಲಾಗಿದೆ. ಎರಡರಿಂದ ತೊಂಬತ್ತೊಂಬತ್ತರವರೆಗಿನ ವೃತ್ತಗಳಲ್ಲಿ ಆತ್ಮಾಲೋಕನದ ಮಹಾಯಾತ್ರೆಯ ಕಥೆಯನ್ನು ನಿರೂಪಿಸಲಾಗಿದೆ.

ಕೃತಿಯ ಮೊದಲಿಗೆ ಹಾರೈಕೆ ಇದ್ದು, ಐದು ಪುಟಗಳ ಪ್ರಸ್ತಾವನೆಯಲ್ಲಿ ಹರಿಹರನ ಬಾಲ್ಯ, ಗುರುದೀಕ್ಷೆ, ಶಿಕ್ಷಣ ಕಲಿತ ಬಗೆ, ಭಕ್ತಿ ಆವರಿಸಿದ್ದು, ಅವನ ಸೋದರಳಿಯ ರಾಘವಾಂಕನ ಬಗ್ಗೆ ಹಾಗೂ ಹೊಯ್ಸಳ ಆಸ್ಥಾನಕ್ಕೆ ಕರಣಿಕನಾಗಿ ಹೋಗಿದ್ದು ಅಲ್ಲಿ ರಾಜಸತ್ತೆಯ ಮುಂದೆ ಸ್ವಾಭಿಮಾನ ತಲೆಬಾಗಿಸಲಾರದೆ ಅಲ್ಲಿಂದ ತೊರೆದು ಹಂಪೆಗೆ ಬಂದು ವಿರುಪಾಕ್ಷನ ಸನ್ನಿಧಿಯಲ್ಲಿ ನೆಲೆಸಿ ಅವನ ಹೆಸರಿನಲ್ಲೆ ಕಾವ್ಯ ಕೃಷಿಯಲ್ಲಿ ತೊಡಗಿಕೊಂಡ ಸನ್ನಿವೇಶವನ್ನು ಸಂಕ್ಷಿಪ್ತವಾಗಿ ಹೇಳಿದ್ದಾರೆ. ಪೀಠಿಕೆ,

ಮುನ್ನುಡಿಯನ್ನೊಳಗೊಂಡ ಈ ಕೃತಿಯ ಪ್ರತಿಯೊಂದು ಶತಕವು 101 ಪದ್ಯಗಳಿಂದ ಕೂಡಿದೆ ಹಾಗೂ ಪ್ರತಿ ಶತಕಕ್ಕೂ 11 ಪುಟಗಳ ಸರಳವಾದ ಭಾವಾನುವಾದವಿದೆ. ಪ್ರಸ್ತಾವನೆಯಲ್ಲಿ ಕವಿಯ ಕಾಲಮಾನದ ಬಗ್ಗೆ ಸಂದಿಗ್ಧತೆಯನ್ನು ವ್ಯಕ್ತಪಡಿಸುತ್ತಾ 1200ರಿಂದ 1252ರ ಅವಧಿಗೆ ಬಂದು ನಿಲ್ಲುತ್ತಾರೆ. ಭಾವಾನುವಾದದಲ್ಲಿ ರಕ್ಷಾಶತಕವು ಹರಿಹರನ ವೈರಾಗ್ಯದ, ಮನಸ್ಸಿನ ತೊಳಲಾಟಗಳ, ಸಂಸಾರದ ಭಾರಗಳಿಂದ ಮುಕ್ತವಾಗುವ ಮನೋತಲ್ಲಣಗಳನ್ನು ತೆರೆದಿಡುತ್ತವೆ. ಕ್ಷಣಿಕವಾದ ಈ ಐಹಿಕಸುಖಕ್ಕಿಂತ ಶಾಶ್ವತವಾದ ಅಲೌಕಿಕಸುಖದೆಡೆಗೆ ಅವನ ಮನಸು ವಾಲಿರುವುದನ್ನು ತಿಳಿಸಿದರೆ ಪಂಪಾಶತಕವು ಹರಿಹರನ ಭಕ್ತಿಯಪಾರಮ್ಯವನ್ನು, ಜಗದೊಡೆಯನಿಗೆ ಶರಣಾದ ಶರಣತ್ವವನ್ನು ತಿಳಿಸುತ್ತಾರೆ. ಈ ಕೃತಿಯ ಅನುಬಂಧದಲ್ಲಿ ಪದ್ಯಗಳ ಅಕಾರಾದಿಯನ್ನು ನೀಡಿದ್ದಾರೆ. ಇಲ್ಲಿ 'ಅ'ದಿಂದ 'ಹ' ವರೆಗೆ ಪದ್ಯ ಸಂಖ್ಯೆಗಳಿಗನುಗುಣವಾಗಿ ಪುಟಸಂಖ್ಯೆಯನ್ನು ನೀಡಿದ್ದಾರೆ. ಕೊನೆಯಲ್ಲಿ ಕಠಿನ ಶಬ್ದಗಳ ಅರ್ಥವನ್ನು ನೀಡಿದ್ದಾರೆ. ಪ್ರತಿಪುಟದ ಅಡಿಯಲ್ಲಿ ಅಡಿ ಟಿಪ್ಪಣಿ ನೀಡಿರುವುದು ಸೂಕ್ತವಾಗಿದೆ. ಇದೇ ಕೃತಿಯನ್ನು ಶಿ.ಶಿ.ಬಸವನಾಳ ಅವರು ಸುಂಕಾಪುರ ಅವರಿಗಿಂತ ಮೊದಲೇ ಅಂದರೆ 1943ರಲ್ಲಿ ಸಂಪಾದಿಸಿದ್ದಾರೆ. ಬಸವನಾಳರು ಸಂಪಾದಿಸಿದ ಕೃತಿಯಲ್ಲಿ ಸಂಪ್ರದಾಯದಂತೆ ಮುನ್ನುಡಿಯಿದ್ದು, ಎರಡು ಪುಟಗಳ ಕವಿ ಪರಿಚಯ ನೀಡಿದ್ದಾರೆ. ಇವರಿಗೂ ಕವಿಯ ಕಾಲದ ಬಗ್ಗೆ ನಿಖರತೆಯಿಲ್ಲ. ಅಡಿಟಿಪ್ಪಣಿ, ಶಬ್ದಕೋಶವನ್ನು ನೀಡಿದ್ದಾರೆ. ಸುಂಕಾಪುರ ಅವರು ಈ ಕೃತಿ ಪರಿಷ್ಕರಣೆಗೆ ಬೇಕಾದ ಹಸ್ತಪ್ರತಿಗಳ ಸಂಖ್ಯೆ ತಿಳಿಸಿ, ಸುದೀರ್ಘವಾದ ಭಾವಾನುವಾದ ನೀಡಿರುವುದು ಶಿ.ಶಿ.ಬಸವನಾಳರಿಗಿಂತಲೂ ಸುಂಕಾಪುರ ಅವರು ಈ ಕೃತಿ ಸಂಪಾದನೆಯಲ್ಲಿ ಹೆಚ್ಚು ಶ್ರಮವಹಿಸಿ, ವ್ಯವಸ್ಥಿತವಾಗಿ ಪರಿಷ್ಕರಣೆ ಮಾಡಿದ್ದಾರೆ. ಆದಾಗ್ಯೂ ಪಾಠಾಂತರಗಳು ಉಳಿದುಕೊಂಡಿರುವುದು ಕಂಡುಬರುತ್ತದೆ.

ನಿಜಲಿಂಗ ಶತಕ ಮತ್ತು ಸೋಮೇಶ್ವರ ಶತಕ

ನಿಜಲಿಂಗ ಶತಕದ ಕರ್ತೃ ನಿಜಲಿಂಗಾರಾಧ್ಯ, ಈತನ ಬಗ್ಗೆ ಸುಂಕಾಪುರ ಅವರು 'ಈ ಶತಕವನ್ನು ರಚಿಸಿದ ಕವಿ ನಿಜಲಿಂಗಾರಾಧ್ಯನೆಂದು ನಂಬಲಾಗಿದೆ. ಕವಿ ಎಲ್ಲಿಯೂ ತನ್ನ ಬಗ್ಗೆ ಹೇಳಿಕೊಳ್ಳದಿರುವುದು ಈ ಊಹಾತ್ಮಕ ನಂಬಿಕೆಗೆ ಕಾರಣ. ರೂಢಿಯಲ್ಲಿ ಕವಿಯ ಹೆಸರಿನೊಂದಿಗೆ ಕೆಲವು ಕೃತಿಯ ಹೆಸರುಗಳು ಇರುತ್ತಿದ್ದರಿಂದ ನಿಜಲಿಂಗನ ಹೆಸರಿನೊಂದಿಗೆ ಈ ಶತಕವನ್ನು ಕರೆಯಲಾಗುತ್ತದೆ. ಗಟ್ಟಿಯಾದ ಮೂಲಾಧಾರಗಳು ಸಿಗುವವರೆಗೂ ನಿಜಲಿಂಗನೇ ಈ ಕೃತಿಯ ಕರ್ತೃವೆಂದು ಹೇಳಬೇಕಾಗುತ್ತದೆ. ನಿಜಲಿಂಗಾರಾಧ್ಯನು ತುಂಗಾಭದ್ರಾತೀರದಲ್ಲಿರುವ ಖಾದ್ರಿಪುರದವನೆಂದು ಆರ್ ನರಸಿಂಹಾಚಾರ್ಯರು ಹೇಳಿರುವುದು ಸರಿಯಲ್ಲವೆಂದು ಹೇಳಬೇಕು. ಗಡಿಬಿಡಿಯಲ್ಲಿ 'ಕದ್ರುಭವಪುರ' ಎಂಬುದನ್ನು 'ಖಾದ್ರಿಪುರ' ಎಂದು ಓದಿಕೊಂಡರೋ ಏನೋ? ಇಲ್ಲವೋ ಅವರಿಗೆ ದೊರೆತ ಹಸ್ತಪ್ರತಿಗಳಲ್ಲಿ ಹಾಗೆ ಬರೆದಿತ್ತೋ ಏನೋ? ಆದರೆ ನಮಗೆ ದೊರೆತ ಎಲ್ಲಾ ಪ್ರತಿಗಳಲ್ಲಿ 'ಖಾದ್ರಿಪುರ'ವೆಂದು ಹೇಳಿಲ್ಲ. ಶತಕದ ಕೊನೆಯ ಪದ್ಯದಲ್ಲಿ "ತುಂಗಾತೀರದೊಳೆಸೆವ ಕದ್ರುಭವಪುರವಾಸ

ನಿಜಲಿಂಗ ಭವಭಂಗ ಶರಣಜನವರದ ಜಯತು''ಎಂದು ಸ್ಪಷ್ಟವಾಗಿ ಬರೆಯಲಾಗಿದೆ. ಕದ್ರುಭವ ಎಂದರೆ ಸರ್ಪ, ಹಾವು ಎಂದು ಅರ್ಥ. 'ಕದ್ರುಭವಪುರ' ಎಂದರೆ 'ಹಾವನೂರು'ಎಂದಾಗುವುದು. ತುಂಗಾಭದ್ರತೀರದಲ್ಲಿ 'ಖಾದ್ರಿಪುರ' ಎಂಬ ಗ್ರಾಮವಿಲ್ಲ. ಗುತ್ತಲದ ಸಮೀಪ 'ಹಾವನೂರು' ಎಂಬ ಗ್ರಾಮವಿದೆ. ಮತ್ತು ಒಂದು ಫಲಕದ ಮೇಲೆ 'ನಿಜಲಿಂಗ ಗುತ್ತಳದ ವಾರ್ಧಿಕ ಷಟ್ಪದಿ' ಎಂದು ಬರೆಯಲಾಗಿದೆ. ಇದರಿಂದ ನಿಜಲಿಂಗಾರಾಧ್ಯನು ಗುತ್ತಲ ಗ್ರಾಮಕ್ಕೆ ಸೇರಿದವನೆಂದು ನಂಬಲು ಆಧಾರದ ಎಳೆ ಸಿಗುತ್ತದೆ. ಇಷ್ಟೇ ಅಲ್ಲದೇ ಶತಕದಲ್ಲಿ ಹೇಳಿದ ''ಕದ್ರುಭವಪುರವಾಸ ನಿಜಲಿಂಗೇಶ್ವರನು'' ಕವಿಯ ಇಷ್ಟದೈವವಾಗಿದ್ದಾನೆ. ಹಾವನೂರು ಗುತ್ತಲದ ಸಮೀಪದಲ್ಲಿದೆ. ಹಾವನೂರಿನಲ್ಲಿ ಸಿದ್ದೇಶ್ವರ ದೇವಾಲಯವಿದ್ದು ಇಂದಿಗೂ ಸುಕ್ಷೇತ್ರವಾಗಿದೆ. ಆ ಸಿದ್ದೇಶ್ವರನೇ ಕವಿಯ ಇಷ್ಟದೇವತೆ ನಿಜಲಿಂಗನಾಗಿರಲು ಸಾಧ್ಯವಿದೆ. ಹೀಗಿರಲು ತುಂಗಭದ್ರತೀರದಲ್ಲಿ ತೀರ ಹತ್ತಿರವಿರುವ ಹಾವನೂರು, ಗುತ್ತಲ ಗ್ರಾಮಗಳು ನಿಜಲಿಂಗಾರಾಧ್ಯನು ಹುಟ್ಟಿ ಬೆಳೆದ ಬಾಳಿದ ಸ್ಥಳಗಳಾಗಿರಬೇಕೆನಿಸುತ್ತದೆ ಎಂದು ಸುದೀರ್ಘವಾದ ಪ್ರಸ್ತಾವನೆಯಲ್ಲಿ ಸುಂಕಾಪುರ ಅವರು ಆಧಾರಪೂರ್ವಕವಾಗಿ ಹೇಳುತ್ತಾರೆ.

ಈಗ ದೊರೆತ ಎಲ್ಲಾ ಹಸ್ತಪ್ರತಿಗಳಲ್ಲಿಯೂ 'ಕದ್ರುಭವಪುರ' ಎಂದು ಇರುವುದರಿಂದ ಅದರ ಕನ್ನಡ ರೂಪ 'ಹಾವನೂರು'ಎಂಬುದೇ ಕವಿಯ ಸ್ಥಳವಾಗಿದೆ ಎಂದು ಸ್ಪಷ್ಟವಾಗುತ್ತದೆ. ನಿಜಲಿಂಗೇಶ ಈತನ ಇಷ್ಟದೈವ. ಇದೇ ಹೆಸರನ್ನೇ ಈತನಿಗೂ ಇಡಲಾಗಿದೆ. ಹೀಗಾಗಿ ಕವಿಯ ಹೆಸರಿನಿಂದಲೇ ಈ ಕೃತಿಯು ಪ್ರಸಿದ್ಧವಾಗಿದೆ–ಎಂದು ಹೇಳಬಹುದು. ನಿಜಲಿಂಗಾರಾಧ್ಯನ ದೊರೆತ ಏಕೈಕ ಕೃತಿ. ಇದರಲ್ಲಿ ಮೂರು ಸಾಲಿನ ಪಲ್ಲವಿ, ಅನಂತರ ನೂರು ವಾರ್ಧಕ ಷಟ್ಪದಿಗಳಿವೆ. ಈಗಾಗಲೇ ಹೇಳಿದಂತೆ ಪ್ರತಿ ಪದ್ಯವೂ 'ನಿಜಲಿಂಗ ಭವಭಂಗ ಶರಣಜನವರದ ಜಯತು' ಎಂದು ಮುಕ್ತಾಯಗೊಳ್ಳುತ್ತದೆ. ''ನಿತ್ಯ ನಿರುಪಮ ವಿಶ್ವಮೂರ್ತಿ ನಿಜಲಿಂಗೇಶನುತ್ತಮೋತ್ತಮವೆನಿಪ ಶತಕವವನು ಬಲ್ಲಂತೆ ಬಿತ್ತರಿಪೆ'' ಎಂದು ಕಾವ್ಯ ಆರಂಭಿಸುವ ಕವಿ ಮುಂದೆ ಕಾವ್ಯದ ಉದ್ದಕ್ಕೂ ಶಿವನ ಲೀಲಾವಿಲಾಸವನ್ನು ಅನೇಕ ವಿಶೇಷಣ ಮತ್ತು ದೃಷ್ಟಾಂತಗಳ ಮೂಲಕ ಹೇಳುತ್ತಾ ಹೋಗುತ್ತಾನೆ. ಯಾವೊಂದು ಪದ್ಯವೂ ಶಿವಸ್ತುತಿಯಿಂದ ಹೊರತಾಗಿಲ್ಲ. ಏನನ್ನೂ ಹೇಳಿದರೂ ಅದು ಶಿವನಿಂದಲೇ ಆದುದು. ಶಿವನೇ ಅದಕ್ಕೂ ಕಾರಣಕರ್ತ. ಹೀಗಾಗಿ ಮಾನವ ತನ್ನೆಲ್ಲ ಸುಖ–ದು:ಖ, ಭವಬಂಧನಗಳಿಂದ ಬಿಡುಗಡೆ ಹೊಂದಲು ಶಿವನಿಗೆ ಮಾತ್ರ ಮೊರೆಹೋಗಬೇಕು ಎಂದು ತಿಳಿಸುತ್ತಾನೆ. ಒಂದರಿಂದ ಹತ್ತರವರೆಗಿನ ಪದ್ಯಗಳನ್ನು ಒಗಟಿನ ರೂಪದಲ್ಲಿ ಬೆಡಗಿನ ಭಾಷೆಯಲ್ಲಿ ಹೆಣೆದಿದ್ದಾನೆ. ಅವುಗಳನ್ನು ಅರ್ಥಮಾಡಿಕೊಳ್ಳಲು ಓದುಗರು ಬೇರೆ ಗ್ರಂಥಗಳ ಅವಲೋಕನ ಮಾಡಬೇಕಾಗುತ್ತದೆ.

ಹನ್ನೊಂದರಿಂದ ಮೂವತ್ತರ ವರೆಗಿನ ಪದ್ಯಗಳಲ್ಲಿ ಶಿವನ ಸಂಸ್ಕಾರ ಚಿತ್ರವನ್ನು ಶೃಂಗಾರಮಯವಾಗಿ ಬಿಡಿಸಲಾಗಿದೆ. ಅಲ್ಲಿ ಶಿವನು ಪಾರ್ವತಿಯೊಡನೆ ಗೈದ ಸರಸ ಸಲ್ಲಾಪ, ಅವನು ಧರಿಸಿದ ವಿಶಿಷ್ಟ–ವಿಚಿತ್ರ ವೇಷಭೂಷಣ. ಅವನು

ಲೋಕಕಲ್ಯಾಣಕ್ಕಾಗಿ ಮಾಡಿದ ಅನೇಕ ಅದ್ಭುತ ಕಾರ್ಯಗಳನ್ನು ಮನದುಂಬಿ ಬಣ್ಣಿಸಲಾಗಿದೆ.

ಮೂವತ್ತೊಂದರಿಂದ ನಲವತ್ತು, ಐವತ್ತೇಳರಿಂದ ಅರವತ್ತು ಮತ್ತು ಎಂಬತ್ತೇಳರಿಂದ ತೊಂಬತ್ತರವರೆಗಿನ ಪದ್ಯಗಳಲ್ಲಿ ಲೋಕನೀತಿಯನ್ನು ನಿರೂಪಿಸಿದರೆ, ನಲವತ್ತರಿಂದ ಐವತ್ತರವರೆಗಿನ ಪದ್ಯಗಳಲ್ಲಿ ಮೂರ್ಖರ ಮತ್ತು ಜಾಣರ ಗುಣಲಕ್ಷಣಗಳನ್ನು ತಿಳಿಸಲಾಗಿದೆ. ಐವತ್ತೊಂದರಿಂದ ಐವತ್ತೈದು ಮತ್ತು ಎಪ್ಪತ್ತೇಳರಿಂದ ಎಂಬತ್ತರವರೆಗಿನ ಪದ್ಯಗಳಲ್ಲಿ ಜೀವಾತ್ಮನ ಹುಟ್ಟು, ಬಾಲ್ಯ, ಯೌವ್ವನ, ಮುಪ್ಪು- ಅವುಗಳಲ್ಲಿ ಆತ ಅನುಭವಿಸುವ ಕಷ್ಟ-ಸುಖಗಳನ್ನು ವರ್ಣಿಸಲಾಗಿದೆ. ತೊಂಬತ್ತಾರರಿಂದ ತೊಂಬತ್ತೆಂಟರವರೆಗಿನ ಪದ್ಯಗಳಲ್ಲಿ ಅರವತ್ನಾಲ್ಕು ವಿದ್ಯೆ, ಹಲವು ಶಾಸ್ತ್ರ, ಎಷ್ಟು ವಿದ್ಯೆ ಕಲಿತರೇನು 'ಪರಮಾತ್ಮ ವಿದ್ಯೆ'ಗೆ ಅವು ಸಮನಲ್ಲ ಎಂದು ಹೇಳಲಾಗಿದೆ. ಕೊನೆಯ ಎರಡು ಪದ್ಯಗಳಲ್ಲಿ ಮತ್ತೆ ಶಿವಸ್ತುತಿ ಮಾಡಿ ಕವಿಯ ಇಷ್ಟ ಇರುವ ಸ್ಥಳವನ್ನು 'ತುಂಗಭದ್ರತೀರದೊಳೆಸೆವ ಕದ್ರುಭವಪುರ ನಿಜಲಿಂಗ ಎಂದು ತಿಳಿಸಿ, ಮುಗಿಸಲಾಗಿದೆ.

ಕೃತಿಯಲ್ಲಿ ಅದರ ರಚನಾ ಕಾಲದ ವಿಷಯವೂ ಉಲ್ಲೇಖವಾಗಿಲ್ಲ. ಮೂಲಗಳಿಂದಲೂ ಈ ಕುರಿತು ಯಾವುದೇ ಆಧಾರಗಳು ಇಲ್ಲಿಯವರೆಗೂ ಲಭ್ಯವಾಗಿಲ್ಲ. ಹೀಗಾಗಿ ನಿಜಲಿಂಗಾರಾಧ್ಯನ ಕಾಲವೂ ಅನಿಶ್ಚಿತವಾಗಿದೆ. ಕವಿಚರಿತೆಕಾರರು ಕೃತಿಯಲ್ಲಿ ಬಳಸಿರುವ ಭಾಷಾಶೈಲಿಯನ್ನು ಗಮನಿಸಿ ಈ ಕವಿ ಕ್ರಿ.ಶ. 1800ರಲ್ಲಿ ಬಾಳಿಬದುಕಿರಬೇಕೆಂದು ಊಹಿಸಿದ್ದಾರೆ. ಇದನ್ನು ಎಂ ಎಸ್ ಸುಂಕಾಪುರ ಒಪ್ಪಿಕೊಂಡಿದ್ದಾರೆ. ನಿಜಲಿಂಗಾರಾಧ್ಯನ ಹೆಸರು, ಇಷ್ಟದೈವ, ಆತನ ಕೃತಿಯಲ್ಲಿ ಬರುವ ಶಿವಸ್ತುತಿ ಮೊದಲಾದವುಗಳನ್ನು ಗಮನಿಸಿದರೆ ಈತ ವೀರಶೈವ ಧರ್ಮಕ್ಕೆ ಸೇರಿದವನಿರಬೇಕು ಎಂಬುದು ಸ್ಪಷ್ಟವಾಗುತ್ತದೆ. ಕನ್ನಡದ ಎಲ್ಲಾ ಶತಕಕಾರನಂತೆ ಈತನು ಭಕ್ತಿ ಜ್ಞಾನ ವೈರಾಗ್ಯಗಳನ್ನು ಬೋಧಿಸುತ್ತಾ ನೀತಿಯನ್ನು ಹೇಳಿದ್ದಾನೆ. ಶಿವಸ್ತುತಿ ಈ ಶತಕದ ಬಹುಭಾಗವನ್ನೇ ಆಕ್ರಮಿಸಿದೆ. ದೇವರ ದೇವನಾದ ನಿಜಲಿಂಗನ ಕೃಪೆಯಿದ್ದವನಿಗೆ ಏತರ ಕೊರತೆಯೂ ಆಗಲಾರದೆಂಬ ಭರವಸೆ ಬಹುತೇಕ ಎಲ್ಲಾ ಪದ್ಯಗಳಲ್ಲೂ ಬಂದಿದೆ.

ಜಾಣಪದ್ಧತಿ ಮೂರ್ಖಪದ್ಧತಿಗಳೆರಡನ್ನು ಕವಿ ಬಹು ಸರಸವಾಗಿ ಹೇಳಿದ್ದಾನೆ. ಈ ಎರಡು ಪದ್ಧತಿಗಳ ವಿಷಯ ನಿರೂಪಣೆಯಲ್ಲಿ ಕವಿಯ ಆಳವಾದ ಲೋಕಾನುಭವ ಅಡಗಿದೆ. ನೀತಿಯ ಜೊತೆಜೊತೆಗೆ ಕವಿ ಮುಂದಿನ ಪದ್ಯಗಳಲ್ಲಿ ನಿಷ್ಠುರವಾದ ಸಮಾಜ ವಿಡಂಬನೆಯನ್ನು ಮಾಡಿದ್ದಾನೆ. ಎಂಬತ್ತು ನಾಲ್ಕು ಲಕ್ಷ ಯೋನಿಗಳಲ್ಲಿ ತೊಳತೊಳಲಿ ಬಂದ ಮಾನುಷ ಜನ್ಮವು ಸಕಲರಲ್ಲೂ ಅಧಿಕ. ಆದರೆ ಸಂಸಾರವೋ ಚಾಡಿಕೋರರು ಚೋರುಗಳು, ಸಿರಿವಂತರಡಿ ನೋಡಿ ಬಳಲುವ ದುರಾಚಾರಿಗಳು, ಪಾಪಿಗಳು, ದುರ್ಜನರು, ದಯಾಹೀನರು ಕೂಡಿ ನಡೆವಲ್ಲಿ ಭೇದವನ್ನಿಕ್ಕುವರು, ಪೆರರ್ಗೆ ಕೇಡೆಣಿಸುವವರು, ಕುಟಿಲರು, ಕುಹಕಿಗಳು-ಮುಂತಾದವರಿಂದ ತುಂಬಿ

ಹೋಗಿದೆ. ಇಂಥವರ ಮಧ್ಯದಲ್ಲಿ ಹೇಗೆ ಜೀವಿಸಬೇಕೆಂದು ಕವಿ ತನ್ನ ಇಷ್ಟದೈವದ ಮೊರೆಹೋಗುತ್ತಾನೆ.

ಪ್ರಪಂಚದಲ್ಲಿ ಮೂರ್ಖರೂ ಇದ್ದಾರೆ. ಜಾಣರೂ ಇದ್ದಾರೆ. ಅದನ್ನು ಅವರವರ ನಡವಳಿಕೆಯ ಮೇಲಿಂದ ಅರಿಯಬೇಕು. ನಿಜಲಿಂಗಾರಾಧ್ಯ ಲೋಕದ ಜನರ ಗುಣಸ್ವಭಾವಗಳನ್ನು ತೆರೆದ ಕಣ್ಣಿನಿಂದ ನೋಡಿ ಇಲ್ಲಿ ಓದುಗರ ಕಣ್ಣಿಗೆ ಕಟ್ಟುವಂತೆ ಸುಂದರವಾಗಿ ಚಿತ್ರಿಸಿದ್ದಾನೆ.

ಮೂರ್ಖ ಪದ್ಧತಿ:

ಕೊಟ್ಟು ಮನದೊಳಗೆ ಕುದಿಯುವವನು ಮೂರ್ಖ
ನಿಷ್ಠವಂತರ ಹಳಿದು ನಿಂದಿಸುವವನು ಮೂರ್ಖ
ಗುರುಹಿರಿಯರ ವಾಕ್ಯವ ಮೀರುವವ ಮೂರ್ಖ
ಅಂತರಂಗವ ಕಪಟಮನುಜಗುಸುರುವವ ಮೂರ್ಖ

ಜಾಣ ಪದ್ಧತಿ:

ಲೋಕದೊಳವರವರ ತೆರದಿ ನಡೆವವ ಜಾಣ
ಕಾಕು ಮನುಜರನು ಸರಿಗಟ್ಟಿಕೊಳ್ಳದವ ಜಾಣ
ಭೂಕಾಂತರಾಸ್ಥಾನದಿ ಜೋಕೆಯಿಂದೇಕಚಿತ್ತದಿ ನಡೆವವ ಜಾಣ
ಮಂದಮತಿ ನಿಂದಿಸಲು ತಾಳಿಕೊಂಡವ ಜಾಣ...

ಹೀಗೆಯೇ ಲೋಕನೀತಿಗಳನ್ನು ಬೋಧಿಸುವ ನುಡಿಗಳು ಶತಕದ ತುಂಬಾ ಮಾಲೆಗಟ್ಟಿ ನಿಂತಿವೆ. ಒಟ್ಟಿನಲ್ಲಿ ಕನ್ನಡದಲ್ಲಿ ಜನಪ್ರಿಯವಾದ ಪಂಪಾಶತಕ, ರಕ್ಷಾಶತಕ, ಅಪರಾಜಿತೇಶ್ವರ ಶತಕ, ರತ್ನಾಕರಾಧೀಶ್ವರ ಶತಕ, ಸೋಮೇಶ್ವರ ಶತಕ–ಇವೆ ಮುಂತಾದವುಗಳ ಸಾಲಿಗೆ ಇದೂ ಸೇರುತ್ತದೆ.

ಸೋಮೇಶ್ವರ ಶತಕ

ಸುಂಕಾಪುರ ಅವರು ಸಂಪಾದಿಸಿದ ಶತಕಸಾಹಿತ್ಯದ ಕೃತಿಗಳಲ್ಲಿ ಸೋಮೇಶ್ವರ ಶತಕ ಕೂಡ ಒಂದು. ಈ ಸೋಮೇಶ್ವರ ಶತಕ ಮತ್ತು ನಿಜಲಿಂಗ ಶತಕ ಕೃತಿಗಳನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಈ ಗ್ರಂಥವನ್ನು ಪರಿಷ್ಕರಿಸುವಲ್ಲಿ ನಮಗೆ ದೊರೆತ ಎಂಟು ಅಚ್ಚಿನ ಪ್ರತಿಗಳನ್ನು ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿರುವ ಒಂದು ತಾಳೆಯೋಲೆಯ ಪ್ರತಿಯನ್ನು ಪರೀಕ್ಷಿಸಿ ಕವಿಯ ಮೂಲಪಾಠಕ್ಕೆ ಸಹಜವಾದುದೆಂದು ತೋರಿದ ಪಾಠವನ್ನು ಇಲ್ಲಿ ಕೊಟ್ಟಿರುವೇ ಎಂದು ಹೇಳಿಕೊಂಡಿದ್ದಾರೆ.

ಕವಿಯ ವಿಷಯ: ಈ ಗ್ರಂಥದ ಕವಿಯ ವಿಷಯವು ನಮಗೆ ಹೆಚ್ಚಾಗಿ ಸಂದೇಹಗಳಿವೆ. ಸೋಮ ಎಂಬುವವನು ಈ ಕೃತಿಯ ಕವಿ. ಪುಲಿಗೆರೆ ಸೋಮನಾಥ ಈತನ ಇಷ್ಟದೈವ. ಈತನ ಕಾಲ ಕ್ರಿ.ಶ. 1300.ಸ್ಥಳ ಪುಲಿಗೆರೆ. ಪೀಠಿಕೆಯ 1,2,3

ಮತ್ತು ನೂರಾವೊಂದು, ನೂರಾಏಳು ಪದ್ಯಗಳಲ್ಲಿ ಕವಿಯು ತನ್ನ ಹೆಸರು ಸೋಮನೆಂದು ಹೇಳಿಕೊಂಡಿರುವನು.

ಸ್ವಾಮೀ ನನ್ನಿಂದ ನೀನಿಂತೊರೆಯಿಸಿದ ಕೃಪಾದೃಷ್ಟಿಯಿಂ ಬೀರೆ ಲೋಕ
ಪ್ರೇಮಂ ತಾಳ್ದಿಂತುನೀತಿ ಪ್ರಕಟನೆ ಪಡೆ ನಾಲ್ಸಾಸಿರಂ ನಾಲ್ಕನೂರುಂ
ಈ ಮಾಯಾ ಪೂರ್ಣಕಲ್ಯಬ್ದತೆ ಗತಿಸಿ ವಿಕಾರ್ಯಬ್ದದಲ್ಲಿಶ್ವರಾ ನೀ
ನ್ನಾ ಮಹಾತ್ಮ್ಯಾಂಘ್ರಿಗಿತ್ತೆ ಪುಲಿಗೆರೆ ನಗರೀ ಶಾಸನಾಂಕ ಮಹೇಶಾ'

ಹೀಗಿದ್ದೂ ಈ ಶತಕದ ಕರ್ತೃವಿನ ಬಗೆಗೆ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡಿರುವುದು ಸೋಜಿಗ ಎನ್ನುತ್ತಾರೆ ಸುಂಕಾಪುರ ಅವರು. ಇದಕ್ಕೆ 'ಸೋಮಾರಾಧ್ಯಶತಕ' ಎನ್ನುವ ಹೆಸರು ಉಂಟು. ಇದರಿಂದ ಇದರ ಕರ್ತೃ ಕ್ರಿ.ಶ.ಹನ್ನೆರಡು ನೂರರ ಪಾಲ್ಕುರಿಕೆ ಸೋಮಾರಾಧ್ಯನೆಂದು ಊಹಿಸುತ್ತಾರೆ. ಕೆಲವರು ಈ ಕೃತಿಯ ಕರ್ತೃ ರತ್ನಾಕರವರ್ಣಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದು ಎಂ.ಜಿ.ನಂಜುಡಾರಾಧ್ಯ. ಅದಕ್ಕೆ ಅವರು ನೀಡುವ ಆಧಾರ ಎಂದರೆ ಅವರಿಗೆ ಸಿಕ್ಕ ಹಸ್ತಪ್ರತಿಯಲ್ಲಿ "ವರಸಮ್ಯಕ್ತ್ವ ಸುಧರ್ಮ ಜೈನಮತದೊಳ್ ತಾಂ ಪುಟ್ಟಿಯೂ ದೀಕ್ಷೆಯಂ/ ಧರಿಸಿ ಸನ್ನುತ ಕಾವ್ಯಶಾಸ್ತ್ರಗಳನಾ ನಿರ್ಮಾಣಮಂ ಮಾಡುತಂ/ ವರರತ್ನಾಕರಯೋಗಿಯೆಂದು ನಿರತಂ ವೈರಾಗ್ಯ ಬಂದೇರಲಾಂ/ ಹರದೀಕ್ಷಾವ್ರತನಾದೆನ್ನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ" ಎಂಬ ಪದ್ಯ ಇರುವುದನ್ನು ಗಮನಿಸಿ ಮೇಲಿನ ಅಭಿಪ್ರಾಯಕ್ಕೆ ಬರುತ್ತಾರೆ ಎಂದು ಪಂ.ಬಿ.ಶಿವಮೂರ್ತಿಶಾಸ್ತ್ರಿಯವರ ಅಭಿಪ್ರಾಯ "ಪಾಲ್ಕುರಿಕೆ ಸೋಮಾರಾಧ್ಯನಿಗೂ ಸೋಮೇಶ್ವರಶತಕದ ಕರ್ತೃ ಸೋಮನಿಗೂ ಯಾವುದೇ ಸಂಬಂಧವಿಲ್ಲ. ಎಂ.ಜಿ.ನಂಜುಂಡಾರಾಧ್ಯರಿಗೆ ದೊರೆತ ಹಸ್ತಪ್ರತಿಯಲ್ಲಿ ಪದ್ಯ ಪ್ರಕ್ಷಿಪ್ತವಾಗಿದೆ. ಇದರಿಂದ ರತ್ನಾಕರವರ್ಣಿಗೂ ಸೋಮೇಶ್ವರಶತಕಕ್ಕೂ ಯಾವುದೇ ಸಂಬಂಧವಿಲ್ಲ- ಎಂದು ಹೇಳಿರುವುದು ಸೂಕ್ತವಾಗಿದೆ ಎಂದು ಸುಂಕಾಪುರ ಅವರು ಕವಿಯ ಬಗ್ಗೆ 23 ಪುಟಗಳ ಪ್ರಸ್ತಾವನೆಯಲ್ಲಿ ತಿಳಿಸುತ್ತಾರೆ. ಸುಂಕಾಪುರ ಅವರು ಕವಿಯ ಕಾಲದ ಬಗ್ಗೆ ಒಮ್ಮತವಿಲ್ಲದಿರುವ ಬಗ್ಗೆ ಅಚ್ಚರಿಯಾಗಿ, ರಂ.ಶ್ರೀ.ಮುಗಳಿ, ಬಿ.ಶಿವಮೂರ್ತಿಶಾಸ್ತ್ರೀ ಯವರು 16ನೆಯ ಶತಮಾನಕ್ಕಿಂತ ಈಚೆಗೆ ರಚಿತವಾದುದು ಎಂಬ ವಾದವನ್ನು ನಿರಾಕರಿಸಿ ಕೃತಿಯಲ್ಲಿಯೇ ಕ್ರಿ.ಶ. 1299 ಎಂಬ ಕಾಲಸೂಚನೆ ಇರುವುದರಿಂದ ಇದನ್ನು ಒಪ್ಪಿಕೊಳ್ಳಬಹುದಾಗಿದೆ ಎನ್ನುತ್ತಾರೆ.

ಈ ಕೃತಿಯು ನಾಲ್ಕುಸಾವಿರದ ನಾಲ್ಕುನೂರು ವರ್ಷ ಕಳೆದ ವಿಕಾರಿನಾಮ ಸಂವತ್ಸರದಲ್ಲಿ ಸಂಪೂರ್ಣವಾಯಿತೆಂದು. ಅಂದರೆ ಕ್ರಿ.ಶ.1300 ಮಾರ್ಚ್ 21ರಂದು. ಇದರಲ್ಲಿ ಮೂರು ತಿಂಗಳು ಕಳೆದರೆ ಕ್ರಿ.ಶ. 1299 ಡಿಸೆಂಬರ್ 29ರಂದು ಈ ಕೃತಿ ರಚಿತವಾಗಿದೆ.ಶತಕದ ಮೊದಲ ಪದ್ಯದಲ್ಲಿ ತನ್ನ ಇಷ್ಟದೈವ ಸೋಮೇಶನನ್ನು 'ಪುಲಿಗೆರೆಸೋಮೇಶ' ಎಂದು ಹೇಳಿರುವುದರಿಂದ ಈತನ ಊರು ಪುಲಿಗೆರೆವಾಗಿದೆ. ಅದು ಈಗಿನ ಲಕ್ಷ್ಮೇಶ್ವರವಾಗಿದೆ. ಈ ಸೋಮೇಶ್ವರ ಶತಕ ಕೃತಿಯು 197 ಸಮವೃತ್ತಗಳಿಂದ ಕೂಡಿದೆ. ಎಲ್ಲಾ ವೃತ್ತಗಳು ಖ್ಯಾತಕರ್ನಾಟಕ ವೃತ್ತಗಳಾಗಿವೆ.

ಮೊದಲ ಮತ್ತು ಕೊನೆಯ ಪದ್ಯಗಳು ಸ್ರಗ್ಧರಾವೃತ್ತಗಳಲ್ಲಿವೆ. ಉಳಿದ 105 ವೃತ್ತಗಳು ಮತ್ತೇಭವಿಕ್ರೀಡಿತ ವೃತ್ತಗಳಾಗಿವೆ. ಸಂಪ್ರದಾಯದಂತೆ ತನ್ನ ಇಷ್ಟದೈವ ಪುಲಿಗೆರೆ ಸೋಮೇಶನ ಸ್ತುತಿಗೆ ಮೊದಲ ಪದ್ಯವನ್ನು ಮೀಸಲಿರಿಸಿದರೆ,

ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಗಳಿಂ ಕೇಳಿತಾಂ
ಕೆಲವಂ ಮಾಳ್ಪವರಿಂದೆ ಕಂಡು ಕೆಲವಂ ಸ್ವಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಗದಿಂದಲರಿಯಲ್ ಸರ್ವಜ್ಞನಪ್ಪಂತೆ ಕೇಳ್
ಹಲವುಂ ಹಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನಸೋಮೇಶ್ವರ

ಎನ್ನುವ ಪ್ರಸಿದ್ಧ ಪದ್ಯದಲ್ಲಿ ಜ್ಞಾನವನ್ನು ಹೇಗೆ ಯಾವ ಕಡೆಯಿಂದ ಗಳಿಸಿಕೊಳ್ಳಬಹುದು ಎಂದು ಹೇಳುವುದಕ್ಕೆ ಎರಡನೆಯ ಪದ್ಯವನ್ನು ಬಳಸಿಕೊಂಡಿದ್ದಾನೆ. ಮೂರನೆಯ ಪದ್ಯದಲ್ಲಿ ಕೃತಿ ರಚನೆಯ ಉದ್ದೇಶ, ಕೃತಿ ಕರ್ತೃವಿನ ಹೆಸರು ಮತ್ತು ಕವಿಯ ವಿನಯವಂತಿಕೆಯನ್ನು ನೋಡಬಹುದಾಗಿದೆ. ಉಳಿದ 4ರಿಂದ 101ರವರೆಗಿನ 97 ಪದ್ಯಗಳಲ್ಲಿ ನೀತಿಬೋಧೆಯನ್ನು ಮಾಡಲಾಗಿದೆ.102ರಿಂದ 105ರವರೆಗಿನ 4 ಪದ್ಯಗಳಲ್ಲಿ 'ವಚನಬ್ರಹ್ಮ'ದ ಸ್ವರೂಪವನ್ನು ನಿರೂಪಿಸಲಾಗಿದೆ. ನೂರಾ ಆರನೆಯ ಪದ್ಯದಲ್ಲಿ ಕೃತಿ ಓದಿನಿಂದ ದೊರೆಯುವ ಫಲವನ್ನು, ಕೊನೆಯ ಪದ್ಯ ನೂರಾ ಏಳನೆಯ ಪದ್ಯದಲ್ಲಿ ಕೃತಿ ಬರೆದ ಕಾಲವನ್ನು ಸೂಚಿಸಲಾಗಿದೆ.ಆದಿಯ ಒಂದನೆಯ ಮತ್ತು ಕೊನೆಯ 107ನೆಯ ಪದ್ಯಗಳನ್ನು ಹೊರತುಪಡಿಸಿ ಉಳಿದೆಲ್ಲಾ ಪದ್ಯಗಳು "ಹರಹರಾ ಶ್ರೀ ಚೆನ್ನಸೋಮೇಶ್ವರ" ಎಂದು ಮುಕ್ತಾಯಗೊಳ್ಳುತ್ತವೆ.

ಸೋಮೇಶ್ವರ ಶತಕ ಮಾನವನಿಗೆ ದಾರಿದೀಪವಾಗಿ ಮಾರ್ಗದರ್ಶನ ಮಾಡುವ ವಿಶಿಷ್ಟ ಕೃತಿ. "ನೀತಿಯೆ ಸಾಧನಂ ಸಕಲಲೋಕಕ್ಕಾಗಬೇಕೆಂದು ಪೇಳಿದ ಸೋಮಂ" ಎಂಬ ಕವಿಯ ಮಾತಿನಿಂದ ನೀತಿಬೋಧೆಯೇ ಇದರ ಪರಮ ಗಮ್ಯ ಗುರಿ. ಪರಮ ಉದ್ದೇಶ ಎಂಬುದು ಸ್ಪಷ್ಟವಾಗುತ್ತದೆ. ನೀತಿ ಬದುಕಿನ ಬಹುಮುಖ್ಯ ಮೌಲ್ಯ. ಅದಿಲ್ಲದ ಜೀವನ ಚುಕ್ಕಾಣಿ ಇಲ್ಲದ ಹಡಗಿನಂತೆ. ಮಾನವನ ಬಾಳು ಸುಗಮವಾಗಲು ಬೇಕಾದ ಅನಿವಾರ್ಯತೆಯನ್ನು ಮನಗಂಡು ರಚಿಸಿದಂತಿದೆ ಈ ಕೃತಿ. ಇಲ್ಲಿ ನಮ್ಮ ಬದುಕಿನ ಸಂಪೂರ್ಣ ಚಿತ್ರಣವಿದೆ. ಜೀವನ ಶೈಲಿ ಬದುಕುವರೀತಿ–ನಿಯಮಗಳಿವೆ. ಲೌಕಿಕ ಪಾರಮಾರ್ಥಿಕ ಬೋಧೆ ಇದೆ. ಮನುಷ್ಯನ ಸ್ವಭಾವ ನಡವಳಿಕೆ, ಸಮಾಜದ ವ್ಯವಸ್ಥೆ, ರಾಜಕೀಯ ಸ್ಥಿತಿಗತಿ, ಲೋಕದ ವ್ಯವಹಾರ, ಒಳಿತು–ಕೆಡುಕು, ಸಜ್ಜನ–ದುರ್ಜನ, ಸುಖ–ದು:ಖ, ಶುಚಿ–ಅಶುಚಿ, ವಿಧಿ–ವಿವೇಕಗಳ ವಿವರಣೆ ಇದೆ. ಕೆಡುಕಿನ ಟೀಕೆ, ಒಳಿತಿನ ಹೆಗ್ಗಳಿಕೆ, ಸತ್ಯದ ಪ್ರಶಂಸೆ, ಅಸತ್ಯದ ದೂಷಣೆ ಇದೆ. ಒಟ್ಟಿನಲ್ಲಿ ಸುಸಂಸ್ಕೃತ ವ್ಯಕ್ತಿತ್ವ, ಸುಖಿ ಜೀವನ, ಸುಖಿ ಸಮಾಜ ಕಟ್ಟುವ ಉದ್ದೇಶ ಈ ಕೃತಿಗಿದೆ.

ಕವಿ ಸೋಮಜ್ಞಾನಿಯಷ್ಟೇ ಅಲ್ಲದೇ ಪ್ರತಿಭಾವಂತ ಕವಿ. ಇದಕ್ಕೆ ಸೋಮೇಶ್ವರ ಶತಕದಲ್ಲಿ ಅನೇಕ ನಿದರ್ಶನಗಳನ್ನು ನೀಡುತ್ತಾನೆ. ಕೆಲವು ಪದ್ಯಗಳಂತು ಅವನ

ಕಲ್ಪನಾಶಕ್ತಿಗೆ ಹಿಡಿದ ಕನ್ನಡಿ ಎನಿಸಿವೆ. ಆತನ ಭಾಷಾಪ್ರಭುತ್ವ, ಛಂದೋರೂಪ, ಪುರಾಣಪ್ರಜ್ಞೆಗಳಿಗೂ ಈ ಶತಕ ಸಾಕ್ಷಿಯಾಗಿ ನಿಂತಿದೆ.

ಉಡುರಾಜ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧಬೀಜಂ ಕಿಲಂ
ಸಿಡಿದುಂ ಪೆರ್ಮರನಾಗದೇ ಎಳೆಗರುಂ ಎತ್ತಾಗದೇ ಲೋಕದೊಳ್
ಮಿಡಿಪಣ್ಣಾಗದೆ ದೈವದೊಲ್ಮೆಯಿರಲು ಕಾಲಾನುಕಾಲಕ್ಕೆ ತಾಂ
ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನಸೋಮೇಶ್ವರ

ಇವು ಆತನ ಕವಿತ್ವಕ್ಕೆ ನಿದರ್ಶನಗಳು. ಹೆಜ್ಜೆಹೆಜ್ಜೆಗೂ ಬಳಸುವ ಪುರಾಣವ್ಯಕ್ತಿಗಳ ದೃಷ್ಟಾಂತಗಳು ಕವಿಯ ಪುರಾಣ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ.

ಮೃಡ ತಾಂ ಭಿಕ್ಷವಬೇಡನೇ, ದ್ರುಪಜೆ ತಾಂ ತೊತ್ತಾಗಲೇ ಪಾಂಡವರ್
ಪಿಡದೊಡಂ ತಿರಿದುಣ್ಣರೆ ಖಳನ ಕೈಯೊಳ್ ಸಿಕ್ಕಳೆ ಸೀತೆ ತಾಂ
ಸುಡುಗಾಡಕ್ಕಿಗೆ ಬಂಟನಾಗನೆ ಹರಿಶ್ಚಂದ್ರಂ ನರರ್ ಪೂರ್ವದೊಳ್
ಪಡೆದಷ್ಟುಣ್ಣದೆ ಪೋಪರೇ ಹರಹರಾ ಶ್ರೀ ಚೆನ್ನಸೋಮೇಶ್ವರ

ಹೀಗೆಯೇ ಮೊದಲಾದ ಪದ್ಯಗಳನ್ನು ನೋಡಬಹುದಾಗಿದೆ. ಸೋಮೇಶ್ವರ ಶತಕ ಕವಿ ಅನಾವಶ್ಯಕ ಭಾಷಾಪಾಂಡಿತ್ಯ ಪ್ರದರ್ಶಿಸದೇ ಸರಳವಾದ ಸುಲಲಿತವಾದ ಭಾಷೆಯನ್ನು ಬಳಸಿ ಅನುಕೂಲಿಸಿದ್ದಾನೆ. ಶರಣರಂತೆ ಜನರಾಡುವ ಜನದನಿಯನ್ನೇ ಬಳಸಿ ತಾನು ಹೇಳ ಬಯಸುವ ನೀತಿ ಹೃದಯ ಮುಟ್ಟುವಂತೆ ಮಾಡಿದ್ದಾನೆ. ಇದರಿಂದ ಕೃತಿ ಪಠಣ ಮಾಡಿದ ಜನರ ಬಾಳು ಬೆಳಗಬೇಕು, ಕೊಳೆಯು ಕಳೆದು ಹೊಸ ಕಳೆಯು ಬರಬೇಕೆಂದು ಸರಸವಾಡುವ ಸರಳವಾದ ಭಾಷೆಯನ್ನು ಪ್ರಯೋಗಿಸಿದ್ದಾನೆ. ಭಾವಕ್ಕೆ ಅನುಗುಣವಾದ ಭಾಷೆ; ಮಾತಿಗೊಂದು ಮಾರ್ಮಿಕವಾಗಿ ಹಸಿಗೋಡೆಯಲ್ಲಿ ಹರಳು ಇಟ್ಟಂತೆ. ಒಂದೊಂದು ನಾಣ್ಣುಡಿಗೆ ಒಂದೊಂದು ದೃಷ್ಟಾಂತ ಕವಿಯ ನುಡಿಗೆ ಹುಸಿ ಎಂಬುದೇ ಇಲ್ಲ' –ಎಂದು ಎಂ.ಎಸ್.ಸುಂಕಾಪುರ ಅವರು ಸುದೀರ್ಘವಾದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಈ ಕೃತಿಯನ್ನು ಅಂದರೆ ಸೋಮೇಶ್ವರ ಶತಕ ಮತ್ತು ನಿಜಲಿಂಗಶತಕಗಳ ಕೃತಿಯನ್ನು 1969ರಲ್ಲಿ ಧಾರವಾಡದ ಶೋಭಗ್ರಂಥಮಾಲೆಯಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ನಿಜಲಿಂಗ ಶತಕಗಳ ಭಾವಾನುವಾದ ನೀಡಿದ್ದಾರೆ ಹಾಗೂ ಸೋಮೇಶ್ವರಶತಕ ಕೃತಿಯ ಅನುಬಂಧದಲ್ಲಿ ಕೆಲವು ಸಂದರ್ಭ ಕಥೆಗಳನ್ನು (ಬ್ರಹ್ಮನ ಶಿರಸ್ಸು ಹೋದ ಕಥೆ, ಕಾಮದಹನ ಕಥೆ, ಬಲಿಚಕ್ರವರ್ತಿಯ ಕಥೆ, ಗರುಡನಿಗೆ ಅಮೃತ ದೊರೆತ ಕಥೆ, ಸತ್ಯಹರಿಶ್ಚಂದ್ರನ ಕಥೆ, ತ್ರಿಪುರ ಸಂಹಾರ, ನಳಚಕ್ರವರ್ತಿಯ ಕಥೆ, ಚಂದ್ರ ಕ್ಷಯರೋಗಿಯೇ? ಇತ್ಯಾದಿ) ನೀಡಿದ್ದಾರೆ. ಯಥಾಪ್ರಕಾರ ಅವರ ಶಾಸ್ತ್ರೀಯ ಕ್ರಮವಾದ ಅಕಾರಾದಿಗಳನ್ನು ನೀಡಿದ್ದಾರೆ. ಕಠಿನ ಶಬ್ದಗಳಿಗೆ ಅರ್ಥಗಳನ್ನು ಕೊಡಲಾಗಿದೆ. ಅಡಿಟಿಪ್ಪಣಿಗಳನ್ನು ಮುಂದುವರೆಸಿಕೊಂಡು ಹೋಗಿರುವುದು ಸಂಪಾದಕರ ಶ್ರಮ ಮತ್ತು ಬದ್ಧತೆಯನ್ನು ತೋರಿಸುತ್ತದೆ.

ಗುಮ್ಮಟ ಶತಕ:

ಸುಂಕಾಪುರ ಅವರು ಸಂಪಾದಿಸಿದ ಮತ್ತೊಂದು ಶತಕಗಳ ಕೃತಿ ಗುಮ್ಮಟಶತಕ. ಗುಮ್ಮಟಯ್ಯಗಳ 'ಗುಮ್ಮಟಶತಕ'ವು 108 ವಿವಿಧ ವೃತ್ತಗಳನ್ನೊಳಗೊಂಡ, 16 ಪುಟಗಳ ಚಿಕ್ಕ ಕೃತಿಯಾಗಿದೆ. ನಾಲ್ಕು ಪುಟಗಳ ಮುನ್ನುಡಿಯಲ್ಲಿ ಗುಮ್ಮಟಯ್ಯಗಳ ಪರಿಚಯವನ್ನು, ಕಾವ್ಯವು ಒಳಗೊಂಡ ವಿಷಯಗಳನ್ನು ಸರಳವಾಗಿ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಅನುಬಂಧವು ಕಠಿಣಶಬ್ದಕೋಶವನ್ನು ಮಾತ್ರ ಹೊಂದಿದೆ. ಈ ಕೃತಿಯನ್ನು ಒಂದೇ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದೇನೆ, ಪಾಠಾಂತರಗಳು ನುಸುಳದಂತೆ ಎಚ್ಚರಿಕೆಯಿಂದ ಲೋಪದೋಷಗಳನ್ನು ಸರಿಪಡಿಸಿಕೊಂಡಿದ್ದೇನೆ ಎಂದು ಸ್ವತಃ ಸುಂಕಾಪುರ ಅವರೇ ಹೇಳಿಕೊಂಡಿದ್ದಾರೆ. ಇದರಿಂದ ಅವರ ಶ್ರಮ ಮತ್ತು ವೈಜ್ಞಾನಿಕ ಮನೋವೃತ್ತಿಯನ್ನು ಗುರುತಿಸಬಹುದಾಗಿದೆ.

ಹರಿಹರನ ಮತ್ತೊಂದು ಕೃತಿ 'ಶ್ರೀವಿರೂಪಾಕ್ಷಶತಕ'ವು ನೂರಾಮುವತ್ತೈದು ಷಟ್ಪದಿಗಳನ್ನು ಹೊಂದಿದ 25 ಪುಟಗಳ ಚಿಕ್ಕ ಕೃತಿಯಾಗಿದೆ. ಸುಂಕಾಪುರ ಅವರು ಕನ್ನಡ ಶತಕ ಸಾಹಿತ್ಯ ಮತ್ತು ಪ್ರಸ್ತುತ ಶತಕದ ಪರಿಚಯವನ್ನು ಮೊದಲ ಏಳು ಪುಟಗಳ ಪ್ರಸ್ತಾವನೆಯಲ್ಲಿ ಮಾಡಿಕೊಡಲಾಗಿದೆ. ಅನುಬಂಧವು ಅಕಾರಾದಿ ಮತ್ತು ಕಠಿಣ ಶಬ್ದಗಳ ಅರ್ಥವನ್ನು ಒಳಗೊಂಡಿದೆ. ಈ ಕೃತಿಯನ್ನು ಒಂದೇ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದರಿಂದ ಪಾಠಾಂತರಗಳು ಕಂಡುಬರುವುದಿಲ್ಲ. ಲೋಪ ದೋಷಗಳನ್ನು ಸ್ವತ: ಸಂಪಾದಕರೇ ಸರಿಪಡಿಸಿಕೊಂಡಿದ್ದಾರೆ. ಶಂಕರದೇವನ 'ಶ್ರೀಗುರು ಶಂಕರೇಶ್ವರ ಶತಕ'ವು 103 ವಿವಿಧ ವೃತ್ತಗಳಿಂದ ಕೂಡಿರುವ ಕೃತಿಯಾಗಿದೆ. ಈ ಕೃತಿಯ ಉಲ್ಲೇಖ 'ಪ್ರಸನ್ನಶಂಕರಲಿಂಗ ರಗಳೆಗಳು' 1976ರಲ್ಲಿ ಪ್ರಕಟಗೊಂಡ ಕೃತಿಯ ಅನುಬಂಧದಲ್ಲಿ ಬಂದಿದೆ. ಇದನ್ನು 1979ರಲ್ಲಿ ಸುಂಕಾಪುರ ಅವರು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಪಾಠಾಂತರಗಳು ಇಲ್ಲಿ ಕಂಡುಬರುತ್ತವೆ.

ಆಕರ ಗ್ರಂಥಗಳು:

1. ಕಲಬುರ್ಗಿ ಎಂ. ಎಂ., (1982), ಶಾಸನ ವ್ಯಾಸಂಗ ಭಾಗ–1, ಧಾರವಾಡ: ಕ.ವಿ.ವಿ.
2. ಹಿರೇಮಠ ಬಿ. ಆರ್., (1976), ಶಾಸನ ಸಂಗ್ರಹ–1, ಧಾರವಾಡ: ಕ.ವಿ.ವಿ.
3. ಕಲಬುರ್ಗಿ ಎಂ. ಎಂ. (ಸಂ), (1976), ಶಾಸನ ವ್ಯಾಸಂಗ–II, ಧಾರವಾಡ: ಕ.ವಿ.ವಿ.
4. ವೃಷಭೇಂದ್ರಸ್ವಾಮಿ ಕೆ., (2006), ಶಾಸನಗಳ ರಚನೆ (ಭಾಗ–1), ಮೈಸೂರು: ಪ್ರಸಾರಾಂಗ, ಮೈಸೂರು ವಿ.ವಿ.